# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1208 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21/08/2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಸೈಬರ್ ಅಪರಾಧ ಮತ್ತು ಆರ್ಥಿಕ ಅಪರಾಧ ಪ್ರಕರಣಗಳು ದಾಖಲಾಗಿವೆ; ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ;</td><td>ರಾಜ್ಯದಲ್ಲಿ 2023, 2024 ಮತ್ತು 2025ನೇ ಜುಲೈವರೆಗೆ ಸೈಬರ್ ಮತ್ತು ಆರ್ಥಿಕ ಅಪರಾಧ ಪ್ರಕರಣಗಳ ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಮತ್ತು ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಪತ್ತೆ ಹಚ್ಚಲಾದ ಆರೋಪಿಗಳ ಸಂಖ್ಯೆ ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ</th><th>ಸೈಬರ್ ಅಪರಾಧ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾಗಿರುವ ಆರೋಪಿಗಳ ಸಂಖ್ಯೆ</th><th>ಆರ್ಥಿಕ ಅಪರಾಧ ಪ್ರಕರಣಗಳ ಸಂಖ್ಯೆ</th><th>ಆರ್ಥಿಕ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾಗಿರುವ ಆರೋಪಿಗಳ ಸಂಖ್ಯೆ</th></tr>
<tr><td>2023</td><td>22253</td><td>1085</td><td>7110</td><td>4819</td></tr>
<tr><td>2024</td><td>22472</td><td>894</td><td>6792</td><td>3960</td></tr>
<tr><td>2025 ಜುಲೈ</td><td>8620</td><td>265</td><td>3704</td><td>1493</td></tr>
</table>
</td></tr>
<tr><td>ಆ)</td><td>ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವ ಬೆಂಗಳೂರು ನಗರದಲ್ಲಿ ಹಾಲಿ ಒಟ್ಟು ಎಷ್ಟು ಸೈಬರ್ ಮತ್ತು ಆರ್ಥಿಕ ಅಪರಾಧಗಳು ಕಂಡುಬಂದಿವೆ. ಎಲ್ಲೆಲ್ಲಿ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ;</td><td>ಬೆಂಗಳೂರು ನಗರದಲ್ಲಿ 2023, 2024 ಮತ್ತು 2025ನೇ ಜುಲೈವರೆಗೆ ಸೈಬರ್ ಅಪರಾಧ ಪ್ರಕರಣಗಳ ಅಡಿಯಲ್ಲಿ ಮತ್ತು ಆರ್ಥಿಕ ಅಪರಾಧ ಪ್ರಕರಣಗಳ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಹಾಗೂ ಪತ್ತೆ ಹಚ್ಚಲಾದ ಆರೋಪಿಗಳ ಸಂಖ್ಯೆ ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ</th><th>ಸೈಬರ್ ಅಪರಾಧ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾಗಿರುವ ಆರೋಪಿಗಳ ಸಂಖ್ಯೆ</th><th>ಆರ್ಥಿಕ ಅಪರಾಧ ಪ್ರಕರಣಗಳ ಸಂಖ್ಯೆ</th><th>ಆರ್ಥಿಕ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾಗಿರುವ ಆರೋಪಿಗಳ ಸಂಖ್ಯೆ</th></tr>
<tr><td>2023</td><td>17817</td><td>427</td><td>3965</td><td>2815</td></tr>
<tr><td>2024</td><td>17862</td><td>364</td><td>3523</td><td>2204</td></tr>
<tr><td>2025 ಜುಲೈ</td><td>6301</td><td>87</td><td>1751</td><td>737</td></tr>
</table>
ಕರ್ನಾಟಕ ರಾಜ್ಯದಲ್ಲಿ ಒಟ್ಟು 43 ಸೈಬರ್ ಕ್ರೈಂ ಪೊಲೀಸ್ ಠಾಣೆಗಳನ್ನು (CCPS-Cyber Crime Police Station) ಸ್ಥಾಪಿಸಲಾಗಿದೆ. ಅದರಲ್ಲಿ ಬೆಂಗಳೂರು ನಗರದಲ್ಲಿ 08 ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ.</td></tr>
</table>

ಬೆಂಗಳೂರು ನಗರದಲ್ಲಿರುವ ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ವಿವರಗಳು ಈ ಕೆಳಕಂಡಂತಿವೆ:-

| ಕ್ರ. ಸಂ | ಪೊಲೀಸ್ ಠಾಣೆಯ ಹೆಸರು |
|---|---|
| 1 | ಪೂರ್ವ ವಿಭಾಗ, ಬೆಂಗಳೂರು ನಗರ |
| 2 | ಪಶ್ಚಿಮ, ವಿಭಾಗ, ಬೆಂಗಳೂರು ನಗರ |
| 3 | ಉತ್ತರ ವಿಭಾಗ, ಬೆಂಗಳೂರು ನಗರ |
| 4 | ದಕ್ಷಿಣ ವಿಭಾಗ, ಬೆಂಗಳೂರು ನಗರ |
| 5 | ಕೇಂದ್ರ ವಿಭಾಗ, ಬೆಂಗಳೂರು ನಗರ |
| 6 | ಆಗ್ನೇಯ ವಿಭಾಗ, ಬೆಂಗಳೂರು ನಗರ |
| 7 | ಈಶಾನ್ಯ ವಿಭಾಗ, ಬೆಂಗಳೂರು ನಗರ |
| 8 | ವೈಟ್‌ಫೀಲ್ಡ್ ವಿಭಾಗ, ಬೆಂಗಳೂರು ನಗರ |

ಇ) ಎಲ್ಲಾ ಠಾಣೆಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ಸಾಧನ ಸಲಕರಣೆ ಮತ್ತು ಯಂತ್ರೋಪಕರಣಗಳು ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆಯೇ;

ಹೌದು, ಒದಗಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ:-

- ರಾಜ್ಯದಲ್ಲಿ **DGP ಸೈಬರ್ ಕಮಾಂಡ್** ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೋಲಿಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.
- ಕರ್ನಾಟಕ ರಾಜ್ಯದಲ್ಲಿ ಒಟ್ಟು **43** ಸೈಬರ್ ಕ್ರೈಂ ಪೊಲೀಸ್ ಠಾಣೆಗಳು (CCPS-Cyber Crime Police Station) ಕರ್ತವ್ಯ ನಿರ್ವಹಿಸುತ್ತಿವೆ. **ಡಿವೈಎಸ್ಪಿ/ಎಸಿಪಿ** ರವರು ಸೈಬರ್ ಕ್ರೈಂ ಪೊಲೀಸ್ ಠಾಣೆ SHO ಆಗಿರುತ್ತಾರೆ. ಈ ಠಾಣೆಗಳು ಸೈಬರ್ ಅಪರಾಧಗಳ ತನಿಖೆಗೆ ಮಾತ್ರ ಮೀಸಲಾಗಿರುತ್ತವೆ.
- ಡಿಜಿಟಲ್ ಫಾರೆನ್ಸಿಕ್ ಪ್ರಯೋಗಾಲಯಗಳು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.
- ಬೆಂಗಳೂರು ನಗರದಲ್ಲಿರುವ **ರಾಜ್ಯ ಸೈಬರ್ ಫಾರೆನ್ಸಿಕ್ ಲ್ಯಾಬ್ ನಲ್ಲಿ ಮೊಬೈಲ್, ನೆಟ್‌ವರ್ಕ್ ಫಾರೆನ್ಸಿಕ್ ಹಾಗೂ ಮಾಲ್‌ವೇರ್ ವಿಶ್ಲೇಷಣಾ ಸಾಮರ್ಥ್ಯ, Magnet AXIOM, Belkasoft, Cellebrite UFED, Oxygen Forensic Detective** ಮುಂತಾದ ಅತ್ಯಾಧುನಿಕ ಸಾಧನಗಳು ಪ್ರಾದೇಶಿಕ ಫಾರೆನ್ಸಿಕ್ ಲ್ಯಾಬ್‌ಗಳು ಸ್ಥಳೀಯ ತನಿಖಾ ಸಾಮರ್ಥ್ಯವನ್ನು ಬಲಪಡಿಸುತ್ತವೆ. ಡೇಟಾ ರಿಕವರಿ, ಸಾಧನ ಇಮೇಜಿಂಗ್, ಸಾಕ್ಷಿ ಕಸ್ಟಡಿ ನಿರ್ವಹಣೆ ಮಾಡಲಾಗುತ್ತಿದೆ.

**ಕೇಂದ್ರ ಮಟ್ಟದ ಸಂಯೋಜನೆ ಮತ್ತು ಮೇಲ್ವಿಚಾರಣೆ**

- ಭಾರತೀಯ ಸೈಬರ್ ಕ್ರೈಂ ಸಂಯೋಜನಾ ಕೇಂದ್ರ (I4C) ರಾಷ್ಟ್ರ ಮಟ್ಟದ ಸಾಮರ್ಥ್ಯ ನಿರ್ಮಾಣ, ಭೀತಿಯ ವಿಶ್ಲೇಷಣೆ ಹಾಗೂ ಕಾನೂನು ಅನುಷ್ಠಾನ ಬೆಂಬಲ ನೀಡುತ್ತದೆ.
- **CERT-In (Computer Emergency Response Team – India)** ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ, ಘಟನಾವಳಿಗಳನ್ನು ನಿರ್ವಹಿಸುತ್ತದೆ.

| | | |
|---|---|---|
| | | ➢ **Cyber Swachhata Kendra** ಮಾಲ್‌ವೇರ್ ಹಾಗೂ ಬಾಟ್‌ನೆಟ್ ಸೋಂಕು ಪತ್ತೆ ಮಾಡಿ ತೆರವುಗೊಳಿಸಲು ಸಹಾಯ ಮಾಡುತ್ತದೆ.<br><br>➢ **NCIIPC (National Critical Information Infrastructure Protection Centre)** ಬ್ಯಾಂಕಿಂಗ್, ಟೆಲಿಕಾಂ, ಇಂಧನ ಹಾಗೂ ರಕ್ಷಣಾ ಮೂಲಸೌಕರ್ಯವನ್ನು ರಕ್ಷಿಸುವ ಸಂಬಂಧ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲು ಅಗತ್ಯವಿರುವ ತಾಂತ್ರಿಕ ಪರಿಣಿತರು, ಮಾಹಿತಿ ತಂತ್ರಜ್ಞರ ಸೇವೆ ಲಭ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅಂತಹ ಪರಿಣಿತರನ್ನು ನೇಮಕ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? | ಹೌದು, ಗಮನಕ್ಕೆ ಬಂದಿರುತ್ತದೆ.<br><br>**ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲು ಅಗತ್ಯವಿರುವ ತಾಂತ್ರಿಕ ಪರಿಣಿತರನ್ನು ನೇಮಕ ಮಾಡಲು ಕೈಗೊಂಡ ಕ್ರಮಗಳ ವಿವರ ಈ ಕೆಳಕಂಡಂತಿದೆ:-**<br><br>➢ **08** ಸೈಬರ್ ಸೆಕ್ಯೂರಿಟಿ ಅನಾಲಿಸ್ಟ ಹಾಗೂ **08** ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ ಒಟ್ಟು **16** ಸೈಬರ್ ತಾಂತ್ರಿಕ ತಜ್ಞರನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನಿಯೋಜಿಸಲು ಆದೇಶ ನೀಡಲಾಗಿರುತ್ತದೆ. ಅದರಲ್ಲಿ **06** ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ ಹುದ್ದೆಗೆ **02** ಸೈಬರ್ ಸೆಕ್ಯೂರಿಟಿ ಅನಾಲಿಸ್ಟ ಹುದ್ದೆಗೆ ಒಟ್ಟು **08** ತಾಂತ್ರಿಕ ತಜ್ಞರನ್ನು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಘಟಕಕ್ಕೆ ನೇಮಕ ಮಾಡಲಾಗಿರುತ್ತದೆ.<br><br>➢ 2019ರಲ್ಲಿ ಸ್ಥಾಪಿತ **CCITR (Centre for Cybercrime Investigation Training & Research)** ಡಾರ್ಕ್ ವೆಬ್, ಕ್ರಿಪ್ಟೋ ಕರೆನ್ಸಿ ಅಪರಾಧಗಳಲ್ಲಿ ಪರಿಣತಿ ತರಬೇತಿ ನೀಡಲಾಗುತ್ತಿದೆ.<br><br>➢ ಸರ್ಕಾರದ ಆದೇಶ ಸಂಖ್ಯೆ: **ಹೆಚ್‌ಡಿ/77/ಇಎಫ್‌ಎಸ್ 2025,** ದಿನಾಂಕ: 21.06.2025ರಲ್ಲಿ ಸಿಐಡಿ ಘಟಕದ ಸೈಬರ್ ಕ್ರೈಂ ವಿಭಾಗವನ್ನು ಬಲಪಡಿಸಲು ಅವಶ್ಯವಿರುವ ಉಪಕರಣಗಳನ್ನು **ರೂ.5.00** ಕೋಟಿಗಳನ್ನು ಖರೀದಿಸಲು ಕ್ರಿಯಾ ಯೋಜನೆಗೆ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದಿಂದ ನೀಡಲಾಗಿದೆ. |

ಸಂಖ್ಯೆ: ಹೆಚ್‌ಡಿ 72 ಪಿಸಿಕ್ಯೂ 2025

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು